ಗುಲ್ಬರ್ಗಾ ಜಿಲ್ಲೆಯಲ್ಲಿ ಅರಣ್ಯ . ಸಲುವಾಗಿ ಉಪಯೋಗಿಸಲಾಗಿರುವ ಜಮೀನಿನ ವಿವರ.

356 - ಶ್ರೀ ಬಾಬುರಾವ್ ಚವ್ವಾಣ (ಶಹಬಾದ್) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನು ಅರಣ್ಯ ಸಲುವಾರಿ ಉಪಯೋಗಿಸಲಾಗುತ್ತಿದೆ (ತಾಲ್ಲೂಕುವಾರು ವಿವರ ನೀಡುವುದು)*

ಆ) *ಚಿತ್ತಾಪುರ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಯಿಂದ ಎಷ್ಟು ಭೂಮಿ ಅರಣ್ಯ ಇಲಾಖೆಗೆ ನೀಡಲಾಗಿದೆ?*

ಇ) *ಹಾಗಿದ್ದಲ್ಲಿ ನೀಡಲಾಗಿದ್ದ ಭೂಮಿಯನ್ನು ಅರಣ್ಯ ಭೂಮಿಗಾಗಿ ಉಪಯೋಗ ಮಾಡಲಾಯಿತೆ (ವಿವರ ನೀಡುವುದು).*

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ತಾಲ್ಲೂಕುವಾರು ವಿವರ ಈ ರೀತಿ ಇದೆ.

1) ಗುಲ್ಬರ್ಗಾ	1298.300	ಹೆಕ್ಟೇರ್
2) ಚೀವರಗಿ	1080.983	"
3) ಯಾದಗಿರಿ	1784.400	"
4) ಶುರಪುರ	696.400	"
5) ಶಹಾಪುರ	578.77	"
6) ಚಿಂಚೋಳಿ	1144.492	"
7) ಹಲಂದ	1003.50	"
8) ಶೆಡಂ	1992.545	"
9) ಅಫಜಲ್‌ಪುರ	722.130	"
10) ಚಿತ್ತಾಪುರ	1132.150	"
	11,433.670	"

ಆ) 3924.80 ಹೆಕ್ಟೇರ್ ಭೂಮಿಯನ್ನು ಕಂದಾಯ ಇಲಾಖೆಯಿಂದ 1978 ಸರಕಾರಿ ಸುತ್ತೋಲೆಯ ಮೇರೆಗೆ ಕೊಡಲಾಗಿತ್ತು.

ಇ) ಇದುವರೆವಿಗೂ 1119.20 ಹೆಕ್ಟೇರ್ ವಿಸ್ತೀರ್ಣದಲ್ಲಿ ನೆಡುತೋಪು ಬೆಳೆಸಲಾಗಿದ್ದು ಉಳಿದ 2805.60 ಹೆಕ್ಟೇರ್ ಜಮೀನನ್ನು ಮತ್ತೆ ಕಂದಾಯ ಇಲಾಖೆಗೆ 1991ರ ಸುತ್ತೋಲೆಯ ಮೇರೆಗೆ ವಾಪಸು ಕೊಡಲಾಗಿದೆ.

ಬ್ರಹ್ಮಾವರ ವಿಧಾನಸಭಾಕ್ಷೇತ್ರದ ವ್ಯಾಪ್ತಿಯ ಪಶು ಚಿಕಿತ್ಸಾಲಯಗಳಿಗೆ ಸಿಬ್ಬಂದಿ ಭರ್ತಿ

359 - ಶ್ರೀ ಬಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಾಸ್ತಾನ ಸೈಬ್ರಕಟ್ಟೆ, ಪಡ್ಡೂರು ಈ ಮೂರು ಸ್ಥಳಗಳಲ್ಲಿ ಪಶುಚಿಕಿತ್ಸಾಲಯಗಳು ಕಾರ್ಯ ಆರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*